# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 650 |
| ಮಾನ್ಯ ಸದಸ್ಯರ ಹೆಸರು | ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 18.08.2025 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಅದರಲ್ಲೂ ಮುಖ್ಯವಾಗಿ ನಗರ ಪ್ರದೇಶದಲ್ಲಿ ಮನುಷ್ಯರು ಸೇವಿಸುವ ತಿಂಡಿ ತಿನಸುಗಳಲ್ಲಿ ಟೇಸ್ಟಿ ಪೌಡರ್, ರಾಸಾಯನಿಕಯುಕ್ತ ಬಣ್ಣ, ಕುಕ್ಕಿಂಗ್ ಸೋಡ ಈ ರೀತಿಯ ಮನುಷ್ಯರ ಆರೋಗ್ಯದ ಮೇಲೆ ಭಯಾನಕ ಪರಿಣಾಮ ಬೀರುತ್ತಿರುವ ಎಷ್ಟು ಆಹಾರ ಮಳಿಗೆ, ಹೋಟೆಲ್ ಗಳಿಗೆ ಅನಿರೀಕ್ಷಿತ ಬೇಟಿ ನೀಡಿ ಫುಡ್ ಇನ್ಸ್‌ಪೆಕ್ಟರ್‌ಗಳು ಎಷ್ಟು ಸ್ಯಾಂಪಲ್ ಸಂಗ್ರಹಿಸಿ ಅವುಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಿ ಬಂದಿರುವ ವರದಿಗಳ ವಿವರಗಳೇನು; | ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006 ಮತ್ತು ನಿಯಮಗಳು 2011 ಗಳನ್ವಯ ಮನುಷ್ಯರು ಸೇವಿಸುವ ತಿಂಡಿ ತಿನಿಸುಗಳಲ್ಲಿ ಟೇಸ್ಟಿಂಗ್ ಪೌಡರ್, ರಾಸಾಯನಿಕಯುಕ್ತ ಕೃತಕ ಬಣ್ಣ, ಕುಕ್ಕಿಂಗ್ ಸೋಡ ಬಳಕೆ ಕುರಿತಂತೆ 2024-25ನೇ ಸಾಲಿನಲ್ಲಿ ಹಾಗೂ 2025-26ನೇ ಸಾಲಿನಲ್ಲಿ ಇದುವರೆಗೆ 33775 ಆಹಾರ ಮಳಿಗೆ, ಹೋಟೆಲ್ ಗಳಿಗೆ ಆಹಾರ ಸುರಕ್ಷತಾಧಿಕಾರಿಗಳು ಅನಿರೀಕ್ಷಿತ ಭೇಟಿ ನೀಡಿ ವಿವಿಧ ಆಹಾರ ಪದಾರ್ಥಗಳ 59,616 ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೊಳಪಡಿಸಲಾಗಿದ್ದು, ಅವುಗಳಲ್ಲಿ 383 ಮಾದರಿಗಳು ಅಸುರಕ್ಷಿತ ಎಂದು ಮತ್ತು 383 ಮಾದರಿಗಳು Substandard ಎಂದು ವರದಿಯಾಗಿರುತ್ತವೆ. |
| ಆ | ಪ್ರತಿನಿತ್ಯ ಆಹಾರ ನಿರೀಕ್ಷಕರು ನಿಯಮಿತವಾಗಿ ಆಹಾರ ಕಲಬೆರಕೆ ಆಗುವುದನ್ನು ತಡೆಯಲು ಹಾಕಿಕೊಂಡಿರುವ ಕಾರ್ಯಕ್ರಮಗಳೇನು; ಇದನ್ನು ತಡೆಗಟ್ಟಲು ಆಹಾರ ಇಲಾಖೆ ಸಂಪೂರ್ಣವಾಗಿ ವಿಫಲವಾಗಿರುವುದನ್ನು ಸರ್ಕಾರ ಪರಿಗಣಿಸಿ ಈ ಬಗ್ಗೆ ಬದಲಿ ಯೋಜನೆಗೆ ಚಿಂತಿಸುತ್ತಿದೆಯೇ: | FSSAI ನಿಗದಿಪಡಿಸಿರುವ ಮಾನದಂಡಗಳ ಪ್ರಕಾರ ಆಹಾರ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆ ಮಾಡಲಾಗುತ್ತಿದೆ.<br><br>ಇದರ ಜೊತೆಗೆ ಬೀದಿಬದಿ ವ್ಯಾಪಾರಿಗಳಿಗೆ ತರಬೇತಿ ನೀಡಿ ಆಹಾರ ಕಲಬೆರಕೆ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. 2024-25 ರಲ್ಲಿ ಎಲ್ಲಾ ಜಿಲ್ಲೆಗಳಲ್ಲಿ 28500 ಜನರಿಗೆ ಇದರ ಬಗ್ಗೆ ಅರಿವು ಮೂಡಿಸಲಾಗಿದೆ.<br><br>ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006 ಕೇಂದ್ರ ಸರ್ಕಾರದ ಕಾಯ್ದೆಯಾಗಿದ್ದು, ಅದನ್ನು ಅನುಷ್ಠಾನಗೊಳಿಸಲು ಎಲ್ಲಾ ಕ್ರಮಗಳನ್ನು ಜರುಗಿಸಲಾಗುತ್ತಿದೆ. |
| ಇ | ರಾಜ್ಯದಲ್ಲಿ ಈ ಆಹಾರ ಕಲಬೆರಕೆ ಸೇವನೆಯಿಂದ ಅನೇಕ ಯುವಕರು, | ರಾಜ್ಯದಲ್ಲಿ ಆಹಾರ ಕಲಬೆರಕೆ ಸೇವನೆಯಿಂದ ಯುವಕರು, ಯುವತಿಯರು, ಆಕಸ್ಮಿಕ ನಿಧನಕ್ಕೆ |

| | | |
|---|---|---|
| | ಯುವತಿಯರು, ಆಕಸ್ಮಿಕ ನಿಧನಕ್ಕೆ ಒಳಗಾಗುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಲು ಹಾಕಿಕೊಂಡಿರುವ ಕಾರ್ಯಕ್ರಮಗಳೇನು; | ಒಳಗಾಗಿರುವ ಕುರಿತ ಪ್ರಕರಣಗಳು ವರದಿ ಆಗಿರುವುದಿಲ್ಲ. |
| ಈ | ಬ್ರಾಯ್ಲರ್ ಕೋಳಿಗಳು ಬೇಗ ಬೆಳೆಯಲು ಅವುಗಳಿಗೆ ಔಷದಿ ಇಂಜೆಕ್ಷ್ ಮಾಡುತ್ತಿರುವುದರಿಂದ ಅವು ತಿನ್ನಲು ಯೋಗ್ಯವೇ; ಈ ಮಾಂಸ ತಿನ್ನುವವರು ಹೆಚ್ಚು ಜನ ಯುವಕರು ಹೃದಯಾಘಾತಕ್ಕೆ ಒಳಗಾಗುತ್ತಿರುವುದರ ಬಗ್ಗೆ ಸರ್ಕಾರ ಪರಿಶೀಲನೆ ನಡೆಸಿ ಈ ಅಂಶವನ್ನು ಗಂಭೀರವಾಗಿ ಪರಿಗಣಿಸಲು ಮತ್ತು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಲು ಮುಂದಾಗುವುದೇ? | ಕೋಳಿ ಮಾಂಸದ ಗುಣಮಟ್ಟ ಕುರಿತಂತೆ ರಾಜ್ಯಾದ್ಯಂತ 2024-25ನೇ ಸಾಲಿನಲ್ಲಿ 370 ಆಹಾರ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೊಳಪಡಿಸಲಾಗಿದ್ದು, ಅವುಗಳಲ್ಲಿ ಅಸುರಕ್ಷಿತ ಎಂದು ಯಾವುದೇ ಮಾದರಿಗಳು ವರದಿಯಾಗಿರುವುದಿಲ್ಲ. |

**ಆಕುಕ 101 ಎಸ್‌ಬಿವಿ 2025**

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಸಚಿವರು